


ಧರಣಿ ನಿರತ ಸಿಎಫ್‌ಟಿಆರ್‌ಐ ನೌಕರರು ('ಮೈಸೂರು ಮಿತ್ರ' ಚಿತ್ರ).

೨/೨/96

# ಸಿಎಫ್‌ಟಿಆರ್‌ಐ ನೌಕರರ ಧರಣಿ

ಮೈಸೂರು, ಫೆ. ೨–ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಸಿ.ಎಫ್.ಟಿ. ಆರ್.ಐ. ಸಿಬ್ಬಂದಿ ಒಕ್ಕೂಟ ಮತ್ತು ಸಿ.ಎಫ್.ಟಿ.ಆರ್.ಐ. ವೈಜ್ಞಾನಿಕ ನೌಕರರ ಸಂಘದ ಸದಸ್ಯರು ಇಂದು ತಮ್ಮ ಕೆಲಸ–ಕಾರ್ಯಗಳನ್ನು ಸ್ಥಗಿತಗೊಳಿಸಿ ಸಾಂಕೇತಿಕ ಧರಣಿ ನಡೆಸಿದರು.

ಸರ್ಕಾರವು ನೇಮಿಸಿದ್ದ ಐನೇ ವೇತನ ಆಯೋಗವು ವರದಿ ನೀಡಿಕೆಯಲ್ಲಿ ವಿಳಂಬ ಮಾಡುತ್ತಿದ್ದು, ಕೇಂದ್ರ ಸರ್ಕಾರದ ಅಧೀನದಲ್ಲಿರುವ ರಾಷ್ಟ್ರೀಕೃತ ಬ್ಯಾಂಕು ಮತ್ತು ಸಂಸ್ಥೆಗಳಲ್ಲಿ ವೇತನ ಪರಿಷ್ಕರಣೆಗೊಂಡಿಲ್ಲದಿರುವುದರಿಂದ ಈ ಸಾಂಕೇತಿಕ ಧರಣಿಯನ್ನು ಹಮ್ಮಿಕೊಳ್ಳಲಾಗಿತ್ತು.

ಐನೇ ವೇತನ ಆಯೋಗವು ಕೂಡಲೇ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕು ಮತ್ತು ೧.೧.೯೬ರಿಂದ ಜಾರಿಗೆ ಬರುವಂತೆ ಈ ವರದಿಯನ್ನು ತಯಾರಿಸಬೇಕು ಹಾಗೂ ಅದು ಅಂದು ನಿವೃತ್ತರಾಗಿರುವ ವ್ಯಕ್ತಿಗಳಿಗೂ ಅನ್ವಯವಾಗಬೇಕು ಮತ್ತು ಆಯೋಗಕ್ಕೆ ಕೂಡಲೇ ವರದಿ ನೀಡಲು ಸಾಧ್ಯವಾಗದಿದ್ದರೆ ಮಧ್ಯಂತರ ಪರಿಹಾರದ ಮತ್ತೊಂದು ತುಟ್ಟಿ ಭತ್ಯೆ ಮತ್ತು ಸಂಪೂರ್ಣ ತುಟ್ಟಿ ಭತ್ಯೆ ಸೇರಿದ ವೇತನ ನೀಡುವಂತೆ ವರದಿ ನೀಡಬೇಕು ಎಂಬ ಬೇಡಿಕೆಗಳನ್ನು ಈ ನೌಕರರು ಕೇಂದ್ರ ಸರ್ಕಾರದ ಮುಂದಿಟ್ಟಿದ್ದಾರೆ.

ಬೆಳಿಗ್ಗೆ ೧೦.೩೦ರಲ್ಲಿ ಕಚೇರಿಯ ಕಾರ್ಯಕಲಾಪಗಳನ್ನು ಬಹಿಷ್ಕರಿಸಿ ಹೊರ ನಡೆದ ನೌಕರರು ಮುಖ್ಯ ದ್ವಾರದ ಬಳಿ ಸುಮಾರು ೩೦ ನಿಮಿಷ ಧರಣಿ ನಡೆಸಿ 'ಬೇಕೇ ಬೇಕು ನ್ಯಾಯ ಬೇಕು', 'ಐನೇ ವೇತನ ಆಯೋಗ ಕೂಡಲೇ ಜಾರಿಗೆ ಬರಬೇಕು' ಎಂಬ ಘೋಷಣೆಗಳನ್ನು ಕೂಗಿದರು.

ತಮ್ಮ ಬೇಡಿಕೆಯಿರುವ ಮನವಿ ಪತ್ರವನ್ನು ಪ್ರಧಾನಿ ಮಂತ್ರಿಗಳು, ಹಣಕಾಸು ಸಚಿವರಿಗೆ ಸಲ್ಲಿಸಿರುವುದಾಗಿ, ಒಕ್ಕೂಟದ ಅಧ್ಯಕ್ಷ ಎನ್. ಸುರೇಶ್ ಪ್ರಸಾದ್ ತಿಳಿಸಿದರು.

ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಪಿ. ವೆಂಕಟರಾವ್, ಸಂಘದ ಅಧ್ಯಕ್ಷ ಜಾನ್ ಪೇರೀರಾ, ಕಾರ್ಯದರ್ಶಿ ಅಕ್ಮಲ್ ಪಾಶ ಅವರುಗಳ ನೇತೃತ್ವದಲ್ಲಿ ಇಂದಿನ ಧರಣಿಯನ್ನು ನಡೆಸಲಾಯಿತು. –ಎನ್ಎಂಎಂ

### ವೇತನ ಆಯೋಗಕ್ಕೆ ಕೇಂದ್ರ ನೌಕರರ ಮನವಿ

# ಇನ್ನೊಂದು ಕಂತು ಮಧ್ಯಂತರ ಪರಿಹಾರಕ್ಕೆ ಶಿಫಾರಸಿಗೆ ಆಗ್ರಹ

ಮೈಸೂರು, ಫೆ. – ಮಧ್ಯಂತರ ಪರಿಹಾರದ ಮತ್ತೊಂದು ಕಂತು ಬಿಡುಗಡೆ ಮತ್ತು ಸಂಪೂರ್ಣ ತುಟ್ಟಿಭತ್ಯೆಯನ್ನು ಮೂಲವೇತನದೊಂದಿಗೆ ಸೇರಿಸುವಂತೆ ಶಿಫಾರಸು ಮಾಡಬೇಕೆಂದು ಸಿಎಫ್‌ಆರ್‌ಐ ನೌಕರರ ಸಂಘ ಮತ್ತು ಸಿಎಸ್‌ಐಆರ್ ನೌಕರರ ಸಂಘ ಐದನೇ ವೇತನ ಆಯೋಗವನ್ನು ಒತ್ತಾಯಿಸಿದೆ.

ಇಂದು ನಡೆದ ಸಂಘದ ಜಂಟಿ ಸಭೆಯಲ್ಲಿ ಈ ಸಂಬಂಧ ಸರ್ವಾನುಮತದ ನಿರ್ಣಯ ಅಂಗೀಕರಿಸಿದ್ದು, ೧.೧.೯೬ರಿಂದ ನಿವೃತ್ತರಾದವರಿಗೂ ನೆರವಾಗುವಂತೆ ಆಯೋಗದ ಶಿಫಾರಸ್ಸುಗಳು ೨.೧.೯೬ರಿಂದ ಜಾರಿಯಾಗುವಂತೆ ಅನುಷ್ಠಾನಗೊಳಿಸಲು ಶಿಫಾರಸು ಮಾಡಬೇಕೆಂದು ಅದರಲ್ಲಿ ಒತ್ತಾಯಿಸಲಾಗಿದೆ.

ವೇತನ ಪುನರ್ವಿಮರ್ಶೆ ಕುರಿತಂತೆ ಶಿಫಾರಸು ಮಾಡುವಾಗ ಈ ಅಂಶಗಳನ್ನು ಗಮನದಲ್ಲಿಡಬೇಕೆಂದು ಸಂಘ ಒತ್ತಾಯಿಸಿತೆಂದು ಸಿಎಫ್‌ಟಿಆರ್‌ಐ ನೌಕರರ ಸಂಘದ ಅಧ್ಯಕ್ಷ ಎನ್. ಸುರೇಶ್ ಪ್ರಸಾದ್, ಮತ್ತು ಸಿಎಫ್‌ಟಿಆರ್‌ಐ ವೈಜ್ಞಾನಿಕ ಸಂಘದ ಅಧ್ಯಕ್ಷ ಜಾನ್ ಪೆರಿರಾ ತಿಳಿಸಿದ್ದಾರೆ.

ಮೇಲಿನ ಅಂಶ ಪರಿಗಣಿಸಲು ವೇತನ ಆಯೋಗ ವಿಫಲಗೊಂಡರೆ ಭಾರತೀಯ ಸಂಘಗಳ ಕಾಯ್ದೆಯಲ್ಲಿ ದತ್ತವಾದ ಹಕ್ಕಿನಂತೆ ಕೇಂದ್ರ ಸರ್ಕಾರದ ಎಲ್ಲ ನೌಕರರು ವಿವಿಧ ರೀತಿಯಲ್ಲಿ ಪ್ರತಿಭಟನೆ ನಡೆಸಬೇಕಾದೀತು ಎಂದು ಅವರು ಎಚ್ಚರಿಸಿದ್ದಾರೆ,